ವೈದ್ಯರ–ಸಿಬ್ಬಂದಿ ವರ್ಗಾವಣೆ

477(941); ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ರಾಜ್ಯ ಆರೋಗ್ಯ ಇಲಾಖೆಯಲ್ಲಿ ವೈದ್ಯರು ಹಾಗೂ ಸಿಬ್ಬಂದಿ ವರ್ಗಾವಣೆಗೆ ಯಾವ ಮಾನದಂಡ ಅಳವಡಿಸಿಕೊಳ್ಳಲಾಗಿದೇ;

ಆ) ವೈದ್ಯರು ಹಾಗೂ ಸಿಬ್ಬಂದಿ ವರ್ಗಾವಣೆಗೆ ಕೌನ್ಸಲಿಂಗ್ ಪದ್ಧತಿ ಅನುಸರಿಸುತ್ತಿರುವ ಕ್ರಮ ಸಮಂಜಸವೇ; ವಿವರಣೆ ನೀಡುವುದು;

ಇ) ರಾಜ್ಯದಲ್ಲಿ ಒಟ್ಟು ಎಷ್ಟು ಸರ್ಕಾರಿ ಸೂಪರ ಸ್ಪೆಷಾಲಿಟಿ ಆಸ್ಪತ್ರೆಗಳಿವೆ; ಯಾವ ರೀತಿ ಕಾರ್ಯನಿರ್ವಹಿಸುತ್ತಿವೆ; (ಇವುಗಳ ವಾರ್ಷಿಕ ಲೆಕ್ಕ ಪತ್ರಗಳ ವಿವರ ಒದಗಿಸುವುದು)

ಈ) ಬಡವರು, ಬಿಪಿಎಲ್, ಎಪಿಎಲ್, ಪಡಿತರ ಚೀಟಿದಾರರೆಲ್ಲರಿಗೂ ಎಕರೂಪದ ವೈದ್ಯಕೀಯ ಜೀವವಿಮೆ ಸೌಲಭ್ಯ ನೀಡುವುದಕ್ಕೆ ಸರ್ಕಾರದ ಕ್ರಮವೇನು; ಇದಕ್ಕೆ ತಗಲುವ ವೆಚ್ಚವೆಷ್ಟು

ಉ) ರಾಜ್ಯದಲ್ಲಿರುವ ಸೊಂಕುರೋಗಗಳು ಯಾವುವು ಇದರ ನಿಯಂತ್ರಣ ಹಾಗೂ ತಡೆಗೆ ಸರ್ಕಾರದ ಕಾರ್ಯಕ್ರಮಗಳು ಯಾವವು; ಇದಕ್ಕೆ ತಗಲುವ ವೆಚ್ಚವೆಷ್ಟು; (ಸಮಗ್ರ ಮಾಹಿತಿ ಒದಗಿಸುವುದು)

ಊ) ಆಸ್ಪತ್ರೆಗಳಲ್ಲಿ ಶುಚಿತ್ವ ಕಾಪಾಡುವಂತಹ ಯಾವ ಕ್ರಮಗಳನ್ನು ಇಲಾಖೆ ಕೈಗೊಂಡಿದೆ, (ಮಾಹಿತಿ ಒದಗಿಸುವುದು)

ಶ್ರೀ ಯು ಟಿ. ಖಾದರ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಆರೋಗ್ಯ ಇಲಾಖೆಯಲ್ಲಿ ವೈದ್ಯರು ಹಾಗು ಸಿಬ್ಬಂದಿ ವರ್ಗಾವಣೆಗೆ ಕರ್ನಾಟಕ ರಾಜ್ಯ ನಾಗರೀಕ ಸೇವೆಗಳ (ವೈದ್ಯಾಧಿಕಾರಿ ಮತ್ತು ಇತರೆ ಸಿಬ್ಬಂದಿ ವರ್ಗಾವಣೆ ನಿಯಂತ್ರಣ) ಕಾಯ್ದೆ–2011 ಹಾಗೂ ಅದರಡಿ ರಚಿಸಲಾದ ನಿಯಮಗಳ ಅನ್ವಯ ಕ್ರಮ ಕೈಗೊಳ್ಳಲಾಗಿತ್ತಿದೆ.

ಆ) ವೈದ್ಯರು ಹಾಗೂ ಸಿಬ್ಬಂದಿ ವರ್ಗಾವಣೆಗೆ ಕೌನ್ಸಿಲಿಂಗ್ ಪದ್ಧತಿ ಅನುಸರಿಸುತ್ತಿರುವುದರಿಂದ ಪಾರದರ್ಶಕವಾಗಿ ಹಾಗೂ ನಿಯಮಾನುಸಾರ ವರ್ಗಾವಣೆ ಮಾಡುವುದರಿಂದ ಸಮಂಜಸವಾಗಿದೆ.

ಇ) ರಾಜ್ಯದಲ್ಲಿ ಕೆಳಕಂಡ ಒಟ್ಟು 09 ಸೂಪರ ಸ್ಪೆಷಾಲಿಟಿ ಆಸ್ಪತ್ರೆಗಳಿವೆ, ಇವುಗಳಲ್ಲಿ ರಾಷ್ಟ್ರೀಯ ನರವಿಜ್ಞಾನ ಮತ್ತು ಮಾನಸಿಕ ಆರೋಗ್ಯ ಸಂಸ್ಥೆ, ಡೀಮ್ಡ್ ಸಂಸ್ಥೆಯಾಗಿದ್ದು, ಸ್ವಾಯುತ್ತ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿದೆ. ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆಯ ಸೂಪರ ಸ್ಪೆಷಾಲಿಟಿ ಆಸ್ಪತ್ರೆ, ಬೆಂಗಳೂರು ವೈದಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ವ್ಯಾಪ್ತಿಗೆ ಒಳಪಡುತ್ತದೆ. ಓಪೇಕ್ ಸೂಪರ ಸ್ಪೆಷಾಲಿಟಿ ಆಸ್ಪತ್ರೆಯು ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವ್ಯಾಪ್ತಿಗೆ ಒಳಪಡುತ್ತದೆ. ಉಳಿದ ಸಂಸ್ಥೆಗಳು ಸರ್ಕಾರಿ ಸ್ವಾಯುತ್ತ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುತ್ತಿವೆ.

ಕ್ರ ಸಂ.	ಆಸ್ಪತ್ರೆಯ ಹೆಸರು	2013–14ನೇ ಸಾಲಿನ ಆಯವ್ಯಯದಲ್ಲಿ ರಾಜ್ಯ ಯೋಜನೆಯಡಿಯಲ್ಲಿ ಒದಗಿಸಲಾಗಿರುವ ಅನುದಾನ (₹ ಲಕ್ಷಗಳಲ್ಲಿ)
1	ಶ್ರೀ [illegible] ನ್ಯೂರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು	2500.00
2	ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಬೆಂಗಳೂರು	1200.00
3	ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ, ಬೆಂಗಳೂರು	450.00

4	ರಾಷ್ಟ್ರೀಯ ನರವಿಜ್ಞಾನ ಮತ್ತು ಮಾನಸಿಕ ಆರೋಗ್ಯ ಸಂಸ್ಥೆ, ಬೆಂಗಳೂರು	400.00
5	ನೆಫ್ರೋಯುರಾಲಜಿ ಸಂಸ್ಥೆ ಬೆಂಗಳೂರು	750.00 (ಯೋಜನೇತರ)
6	ಕರ್ನಾಟಕ ಮಧುಮೇಹ ಚಿಕಿತ್ಸಾ ಕೇಂದ್ರ ಬೆಂಗಳೂರು	600.00
7	ಎಸ್.ಡಿ.ಎಸ್. ರಾಜೀವ ಗಾಂಧಿ ಎದೆರೋಗಗಳ ಆಸ್ಪತ್ರೆ, ಬೆಂಗಳೂರು	1010.00
8	ಧಾರವಾಡ ರಾಷ್ಟ್ರೀಯ ನರವಿಜ್ಞಾನ ಮತ್ತು ಮಾನಸಿಕ ಆರೋಗ್ಯ ಸಂಸ್ಥೆ, ಧಾರವಾಡ	430.00
9	ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆಯ ಸೂಪರ ಸ್ಪೆಷಾಲಿಟಿ ಆಸ್ಪತ್ರೆ, ಬೆಂಗಳೂರು	800.00
10	ಓಪೇಕ ಸೂಪರ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು	1000.00

ಈ) Universal Health Care ಯೋಜನೆಯಡಿಯಲ್ಲಿ ಸದ್ಯಕ್ಕೆ 2 ಜಿಲ್ಲೆಗಳನ್ನು (ಮೈಸೂರು ಹಾಗೂ ರಾಯಚೂರು) Pilot Project ನಡಿಯಲ್ಲಿ ಆಯ್ಕೆ ಮಾಡಿಕೊಂಡು NRHM ನಿಂದ ಬಿಡುಗಡೆಯಾದ ಒಂದು ಕೋಟಿ ರೂಗಳ ಅನುದಾನದಲ್ಲಿ ಮಾಹಿತಿಯನ್ನು ಸಂಗ್ರಹಿಸಿ ಯೋಜನೆಯನ್ನು ರೂಪಿಸಲು ಕ್ರಮವಹಿಸಲಾಗುತ್ತದೆ.

ಈ ಯೋಜನೆಯು ಇನ್ನು ಪ್ರಾಥಮಿಕ ಹಂತದಲ್ಲಿದ್ದು, ಯೋಜನಾ ವೆಚ್ಚವನ್ನು ಇನ್ನೂ ಅಂದಾಜಿಸಿಲ್ಲ.

ಉ) ರಾಜ್ಯದಲ್ಲಿರುವ ಸೋಂಕು ರೋಗಗಳು

- ಡೆಂಗ್ಯೂ, ಚಿಕುಂಗುನ್ಯಾ, ಮಲೇರಿಯಾ, ಕರುಳುಬೇನೆ, ಕಾಲರಾ, ಇಲಿಜ್ವರ, ವಿಷಮಶೀತಜ್ವರ, ವೈರಲ್ ಹೆಪಟೈಟಿಸ್, ಟೈಫಾಯಿಡ್, ಅರಶನಕಾಮಾಲೆ

ಸೋಂಕುರೋಗಗಳ ನಿಯಂತ್ರಣ ಹಾಗೂ ತಡೆಗೆ ಸರ್ಕಾರದ ಕಾರ್ಯಕ್ರಮಗಳು

- ಭಾರತ ಸರ್ಕಾರವು ನಿಯೋಜಿಸಿರುವ ಸಮಗ್ರ ರೋಗಗಳ ಕಣ್ಗಾವಲು ಯೋಜನೆಯು ಮಹತ್ವವಾದ ಪಾತ್ರ ವಹಿಸುತ್ತದೆ. ಸಾಂಕ್ರಾಮಿಕ ರೋಗಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕಾಗಿ 28 ಎಪಿಡಮಲಾಜಿಸ್ಟ್‌ರನ್ನು ನೇಮಕ ಮಾಡಲಾಗಿರುತ್ತದೆ. ರಾಜ್ಯದಲ್ಲಿ 8 ಸರ್ಕಾರಿ ವೈದ್ಯಕೀಯ ಕಾಲೇಜುಗಳೊಂದಿಗೆ ಇದೇ ಕಾರ್ಯಕ್ರಮದಡಿಯಲ್ಲಿ ಪ್ರಯೋಗಾಲಯ ಸೌಲಭ್ಯಗಳನ್ನು ಪಡೆಯಲು ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಆರೋಗ್ಯ ಸಿಬ್ಬಂದಿಯವರಿಗೆ ರೋಗ ನಿಯಂತ್ರಣದ ವಿಚಾರವಾಗಿ ತರಬೇತಿಯನ್ನು ನೀಡಲಾಗುತ್ತಿದೆ.

ಸೋಂಕುರೋಗಗಳ ನಿಯಂತ್ರಣಕ್ಕೆ ತಗಲುವ ವೆಚ್ಚ

- ಸಾಂಕ್ರಾಮಿಕ ರೋಗಗಳ ಕಣ್ಗಾವಲು ಯೋಜನೆಯನ್ನು ಅನುಷ್ಠಾನಗೊಳಿಸಲು ಭಾರತ ಸರ್ಕಾರವು ಈ ಕೆಳಕಂಡಂತೆ ಅನುದಾನವನ್ನು ಬಿಡುಗಡೆ ಮಾಡಿದುತ್ತದೆ.
- ಅ. ಮಾನವ ಸಂಪನ್ಮೂಲ - 276.4 ಲಕ್ಷ
- ಆ. ಪ್ರಯೋಗಾಲಯ ಸೌಲಭ್ಯಗಳಿಗೆ 32 ಲಕ್ಷ.
- ಇ. ಕ್ಷೇತ್ರ ಭೇಟಿ, ಕಣ್ಗಾವಲು ಮತ್ತು ರೋಗ ನಿಯಂತ್ರಣ ಕಾರ್ಯಕ್ರಮ–112.80 ಲಕ್ಷ.
- ಈ. ಇಲಾಖಾ ಆರೋಗ್ಯ ಸಿಬ್ಬಂದಿ ತರಬೇತಿ -8 ಲಕ್ಷ.

- ❖ ರಾಜ್ಯ ಸರ್ಕಾರದ ವತಿಯಿಂದ 1,94,749 ರೂಪಾಯಿಗಳನ್ನು ಹೆಚ್1 ಎನ್1 ಸೋಂಕು ನಿಯಂತ್ರಣಕ್ಕಾಗಿ ಬಿಡುಗಡೆಯಾಗಿದ್ದು, ಟ್ರಿಪಲ್ ಲೇಯ್ ಮಾಸ್ಕ್, ಎನ್–95 ಮಾಸ್ಕ್ ಹಾಗೂ ಪಿ.ಪಿ.ಇ ಗಳನ್ನು ಖರೀದಿಸಲಾಗಿದೆ. ಹಾಗೂ
- ❖ ಐದು ಲಕ್ಷ ರೂಪಾಯಿಗಳನ್ನು NIMHANS ಪ್ರಯೋಗಾಲಯಕ್ಕೆ Test kit ಗಳನ್ನು ಖರೀದಿಗಾಗಿ ಬಿಡುಗಡೆ ಮಾಡಲಾಗಿರುತ್ತದೆ.

ಊ) ವಿವಿಧ ಆಸ್ಪತ್ರೆಗಳಲ್ಲಿ ಮಂಜೂರಾದ ಗ್ರೂಪ್ 'ಡಿ' ಹುದ್ದೆಗಳಲ್ಲಿ ಶೆ.30% ಹುದ್ದೆಗಳನ್ನು ಖಾಲಿ ಇಟ್ಟು ಈ ಹುದ್ದೆಗಳ ವೇತನ ಭತ್ಯೆಗಳಿಗೆ ಸಮನಾದ ಮೊತ್ತಕ್ಕೆ ಹೊರ ಗುತ್ತಿಗೆ ಆಧಾರದಲ್ಲಿ (Non-Clinical Services) ಆಸ್ಪತ್ರೆಯ ಸುಚಿತ್ವ ಕಾಪಾಡಲು ಕ್ರಮ ವಹಿಸಲಾಗುತ್ತಿದೆ. ಹಾಗೂ ಆಸ್ಪತ್ರೆಯಲ್ಲಿ ಉತ್ಪತ್ತಿಯಾಗುವ ಘನ ತಾಜ್ಯ ಮತ್ತು ದ್ರವ ತಾಜ್ಯವನ್ನು ತ್ಯಾಜ್ಯವನ್ನು Prevention and Control of Pollution Act 1974 ಕಾಯ್ದೆಯಂತೆ ವಿಲೇವಾರಿ ಮಾಡಲಾಗುತ್ತಿದೆ.

ತಾಂಡಾಗಳನ್ನು ಅಭಿವೃದ್ಧಿ ಪಡಿಸುವುದು

478(311); ಡಾ॥ ಉಮೇಶ್ ಜಿ. ಜಾಧವ್ (ಚಿಂಚೋಳಿ).

ಅ) ಕರ್ನಾಟಕ ರಾಜ್ಯದಲ್ಲಿರುವ ತಾಂಡಾಗಳ ಸಂಖ್ಯೆ ಎಷ್ಟು; ಅವುಗಳ ಅಭಿವೃದ್ಧಿಗೆ ಯಾವ ಯಾವ ಯೋಜನೆಗಳನ್ನು ಕೈಗೊಳ್ಳಲಾಗಿದೆ ಹಾಗೂ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾರ್ಪಾಡು ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ? (ವಿವರ ನೀಡುವುದು)